## ಹಾಡಿನಲ್ಲೂ ತಾರತಮ್ಯ ಏಕೆ?



ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಸರಿಗಮಪ ರಿಯಲಿಟಿ ಶೋ ಅದ್ಭುತ ಕಾರ್ಯಕ್ರಮ. ಪ್ರತಿಭಾವಂತ ಯುವ ಗಾನಕೋಗಿಲೆಗಳಿಗೆ ಸೂಕ್ತ ವೇದಿಕೆಯಾಗಿದೆ. ಆದರೆ ಈ ಕಾರ್ಯಕ್ರಮದಲ್ಲಿರುವ ಮೂರು ಜನ ತೀರ್ಪುಗಾರರು ಹಾಡಿದ, ಸಂಗೀತ ಸಂಯೋಜಿಸಿದ ಹಾಡುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದಾರೆ. ಬೇರೆ ಬೇರೆ ಸಂಗೀತ ನಿರ್ದೇಶಕರ, ಗಾಯಕರ ಹಾಡುಗಳಿಗೆ ಅವಕಾಶ ಕೊಡಬಹುದಲ್ಲವೇ? ಏಕೆಂದರೆ ಹಾಡುಗಳಲ್ಲಿಯೂ ತಾರತಮ್ಯ ನೀತಿ ಅನುಸರಿಸಿದಂತಾಗುತ್ತದೆ ಅಲ್ಲವೇ?

—ರಾಂಚಂದ್ರ ಕೊಪ್ಪಲು ತೀರ್ಥಹಳ್ಳಿ

## ಅನಿವಾರ್ಯತೆ ಏನಿದೆ?

ಅನೇಕ ವೀಕ್ಷಕರು ಆರು ತಿಂಗಳಿನಿಂದ ಹೇಳುತ್ತಿರುವಂತೆ ಕಲರ್ಸ್ ಕನ್ನಡದ 'ಕನ್ನಡತಿ' ಹಳಿ ತಪ್ಪಿ, ಅಂಕೆ ತಪ್ಪಿ, ಎಗ್ಗಿಲ್ಲದೆ ಹೋಗುತ್ತಲೇ ಇರುವುದು ಆಶ್ಚರ್ಯವಾಗುತ್ತಿದೆ. ನಮ್ಮ ಆದಿಯ ಹಕಾರರಹಿತ ಮಾತು, ವರೂಧಿನಿಯ ವಿಕಾರ, ಸಾನ್ಯಾಳ ವಿಕೃತಿ, ಬಿಂದುವಿನಂತಹ ಅನೇಕಾನೇಕ ಅಸಂಬದ್ಧ ಪಾತ್ರಗಳು ರತ್ನಮಾಲಾ, ಹರ್ಷ ಮತ್ತು ಭುವಿ ಅಲಿಯಾಸ್ ಸೌಪರ್ಣಿಕಾಳಂತಹ ಪಾತ್ರಗಳ ವಿಚಿತ್ರ ನಡವಳಿಕೆಗಳು ಹಾಗೂ ಎಲ್ಲರ ಬಾಯಿಂದ ಅರ್ಥರಹಿತ ಆದರೆ ವಿಚಾರಪೂರ್ಣವೇನೋ ಅನ್ನಿಸುವಂಥ ಉದ್ದುದ್ದ ಕೃತಕ ಹುಸಿ ಸಂಭಾಷಣೆಗಳು ಎಲ್ಲವನ್ನೂ ಸಹಿಸಿಕೊಳ್ಳುತ್ತಿರುವ 'ಕನ್ನಡಿಗ' ವೀಕ್ಷಕರಿಗೆ ಇನ್ನೂ ಆ ಚಿತ್ರಹಿಂಸೆ ಮುಂದುವರಿಸಬೇಕಾದ ಅನಿವಾರ್ಯತೆ ಏನಿದೆಯೋ ಗೊತ್ತಿಲ್ಲ.

ಸಮಾಜದ ಇತರೆ ಅಂಗಗಳಾದ ವೈದ್ಯಕೀಯ, ಪೊಲೀಸ್, ಶಾಲೆಗಳು, ಕಾರ್ಪೊರೇಟ್ ಆಡಳಿತದ ವ್ಯವಹಾರಗಳು ಯಾವುದನ್ನೂ ಕೂಡ ಬಿಡದೆ ಭಯಂಕರವಾಗಿ ಬಿಂಬಿಸುತ್ತಿರುವ ಈ ಧಾರಾವಾಹಿಯ ನಿರ್ದೇಶನವರ್ಗಕ್ಕೆ ಅಭಿನಂದನೆಗಳು. ನಿಮಗೆ ಬೇಡದಿದ್ದರೆ ನೋಡಬೇಡಿ ಅನ್ನುವ ಚಮತ್ಕಾರಿಕ ಉತ್ತರ ಬೇಡ. ವಿವೇಕ, ವಿವೇಚನೆ ಮತ್ತು ಜವಾಬ್ದಾರಿ ನಿಮ್ಮಲ್ಲೂ ಇರಬೇಕೆಂದು ಬಯಸುವುದು ತಪ್ಪೇ?

—ಎಂ.ಜಿ. ಶ್ರೀನಾಥ್, ಮೈಸೂರು

ವಾರದ ಪತ್ರ

## ಭಾವಗೀತೆಗೂ ಆದ್ಯತೆ ಇರಲಿ

60–70ರ ದಶಕದಲ್ಲಿ ಪಿ. ಕಾಳಿಂಗರಾವ್ ಅವರಿಂದ ಹೆಚ್ಚು ಪ್ರವರ್ಧಮಾನಕ್ಕೆ ಬಂದ ಭಾವಗೀತೆಗಳ ಲೋಕ ನಂತರದ ದಿನಗಳಲ್ಲಿ ಮೈಸೂರು ಅನಂತಸ್ವಾಮಿಯವರ ಮುಖಾಂತರ ಅದರ ವ್ಯಾಪ್ತಿ ಇನ್ನೂ ಹೆಚ್ಚಾಯಿತು. ಮನೆ ಮನೆಗಳಲ್ಲೂ ಭಾವಗೀತೆಗಳ ಕಂಪು ಪ್ರಸರಿಸತೊಡಗಿತ್ತು. ಇನ್ನು ಸಿ. ಅಶ್ವತ್ಥ್ ಅವರಂತೂ ಈ ಲೋಕವನ್ನು ಉಚ್ಛ್ರಾಯ ಸ್ಥಿತಿಗೆ ತೆಗೆದುಕೊಂಡು ಹೋದರು. ಒಬ್ಬ ಕವಿಯ ಕವಿತೆಗಳಿಗೆ ರಾಗ ಸಂಯೋಜಿಸಿ ಸಂಗೀತ ರೂಪಕ್ಕೆ ತಂದು ಗಾಯಕರು ಭಾವಪೂರ್ಣವಾಗಿ ಹಾಡಿದಾಗ ಆ ಕವಿ ಆಗುವ ಸಂತೋಷ ಅಷ್ಟಿಷ್ಟಲ್ಲ.

ಆದರೆ ಇತ್ತೀಚೆಗೆ ಯಾಕೋ ಸಂಗೀತದ ರಿಯಾಲಿಟಿ ಶೋಗಳಲ್ಲಿ ಭಾವಗೀತೆಗಳ ಗಾಯನವನ್ನು ಕೇಳುವ ಅವಕಾಶವೇ ಇಲ್ಲದಂತಾಗಿದೆ. ಭಾವಗೀತೆಗಳು ಪ್ರಾಮುಖ್ಯತೆ ಪಡೆದಿರುವುದು, ಅದು ಕರ್ನಾಟಕದಲ್ಲಿ ಮಾತ್ರ ಎಂದು ಗಾಯಕ ಎಸ್‌ಪಿಬಿ ಅವರು ಯಾವಾಗಲೂ ಹೇಳುತ್ತಿದ್ದರು. ಇನ್ನು ಮುಂದಾದರೂ ಸಂಗೀತದ ರಿಯಾಲಿಟಿ ಶೋಗಳ ಮುಖಾಂತರ ಭಾವಗೀತೆಗಳ ಕ್ಷೇತ್ರ ಮೊದಲಿನ ರಂಗನ್ನು ಪಡೆಯುವಂತಾಗಲಿ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಕಡಿವಾಣ ಬೇಕು

ಕನ್ನಡದ ವಿವಿಧ ಚಾನೆಲ್‌ಗಳಲ್ಲಿ ಬರುವ ಕಾರ್ಯಕ್ರಮಗಳನ್ನು ನೋಡುತ್ತ ಇರುವಾಗ ಇವೆಲ್ಲ ಹೇಗೆ ಸಮಾಜದ ದಿಕ್ಕು ತಪ್ಪಿಸುತ್ತಿದೆ ಎಂಬ ಯೋಚನೆಯೇ ಗಾಬರಿ ಹುಟ್ಟಿಸುತ್ತದೆ. ಇವರ ಕಾರ್ಯಕ್ರಮಗಳಿಗೆಲ್ಲ ಅದೇನೋ ಟಿಆರ್‌ಪಿ ಎಂಬ 'ಮಾಯಾಮೃಗ'ವನ್ನು ಯಾರ ನಿರ್ಧರಿಸುತ್ತಾರೋ ಗೊತ್ತಿಲ್ಲ. ಒಂದೇ ಉದಾಹರಣೆ 'ಮಂಗಳ ಗೌರಿ' ಮದುವೆ. ಇದರಲ್ಲಿನ ಅಸಂಬದ್ಧ ಸಂಗತಿಗಳು ನೋಡಲು ಬೇಸರ ಅನಿಸುತ್ತದೆ.

ಇದು ಬೇಡ ಸುದ್ದಿವಾಹಿನಿಗೆ ಹೋಗೋಣ ಅಂದರೆ ಅಲ್ಲೂ ಇದೇ ಕಥೆ. ಸುದ್ದಿ ವಾಹಿನಿಗಳಿಗೆ ಕಡಿವಾಣ ಬೇಕೇ ಬೇಕು ಎಂದು ಅನಿಸುತ್ತದೆ. ಅವರದೇ ನೀತಿ ಸಂಹಿತೆ ಎನ್ನುವುದು ಅವರ ಅನುಕೂಲಕ್ಕೆ ಮಾತ್ರ. ಒಂದು ಸ್ವತಂತ್ರ ಸಮಿತಿ ಖಂಡಿತ ಬೇಕು. ಇಲ್ಲವಾದಲ್ಲಿ ಸಮಾಜದ ಗತಿ ಯಾರೂ ಹೊಣೆಯಾಗಲ್ಲ.

—ಕೆ.ಎಸ್. ಸೋಮೇಶ್ವರ

## ದೌರ್ಜನ್ಯಕ್ಕೆ ಕೊನೆ ಇಲ್ಲವೇ?

ಈಗ ಪ್ರಸಾರ ಆಗುತ್ತಿರುವ ಧಾರಾವಾಹಿಗಳಲ್ಲಿ ಹೆಣ್ಣಿನ ಮೇಲಿನ ದೌರ್ಜನ್ಯ ಮಿತಿ ಮೀರಿದೆ. ವಿಪರ್ಯಾಸ ಎಂದರೆ ಈ ಎಲ್ಲಾ ಸಂಚಿಕೆಗಳ ಕೇಂದ್ರ ಬಿಂದು ವಿಕೃತ ಮನಸ್ಸಿನ ಖಳ ನಾಯಕಿಯರು. 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ಹಳೇ ನಾಣ್ನುಡಿಗೆ ಅಂಟಿ ಕೊಂಡ ದೃಶ್ಯಗಳು. ಆಶ್ಚರ್ಯ ಎಂಬಂತೆ ಇಲ್ಲಿ ಧಾರಾವಾಹಿಗಳ ಗಂಡು ಪಾತ್ರಗಳು ಮೂಕ ಬೊಂಬೆಗಳ ಹಾಗೆ ಅಷ್ಟೇ ಕೇವಲ ನಿಮಿತ್ತ ಮಾತ್ರ. ಧಾರಾವಾಹಿ ಅಂದ್ರೆ ಹೀಗೇ ಇರಬೇಕು ಎಂಬ ಸಿದ್ಧ ಸೂತ್ರ ತರ್ಕವೇ ಇಲ್ಲದ ತಂತ್ರ ಕುತಂತ್ರಗಳ ದೃಶ್ಯಗಳ ಸರಮಾಲೆಯೇ ಇಲ್ಲಿವೆ.

ಸಮಾಜದ ಯಾವುದೇ ನೀತಿ ನಿಯತ್ತಾಗಿರುವ ಹೆಣ್ಣನ್ನು ತೀವ್ರ ಹಗುರವಾಗಿ ಮತ್ತು ಸಮಾಜದ ಕಳಂಕ ಎಂದು ಬಿಂಬಿಸುವ ಪರಿಪಾಠ ಈಚೆಗೆ ತೀವ್ರವಾಗಿದೆ. ಅದರಲ್ಲೂ ವರ್ಣ ಭೇದ, ಜಾತಿ ಭೇದ ಮೆರೆಸುವ ದೃಶ್ಯಗಳಿಗೆ ಮೊದಲು ಕಡಿವಾಣ ಹಾಕುವ ಅಗತ್ಯವಿದೆ. ಎಲ್ಲೋ ಇದೊಂದು ಇರಬಹುದು ಎಂದು ಬೇರೆ ವಾಹಿನಿ ಒತ್ತಿದರೆ ಅಲ್ಲಿಯೂ ಅಲ್ಲಿಯೂ ಇದೇ ಸಿದ್ಧ ಸರಕಿನ ಸೂತ್ರಕ್ಕೆ ಜೋತು ಬಿದ್ದ ಸಂಚಿಕೆ. ಹೆಸರು ಹೇಳದೇ ಇರುವುದೇ ಒಳಿತು ಎನ್ನುವ ಕಾರಣಕ್ಕೆ ಯಾವ ಹೆಸರನ್ನೂ ಹೇಳಿಲ್ಲ. ಧಾರಾವಾಹಿ ಯಾವುದಾದರೇನು, ಸಮಾಜಕ್ಕೆ ಯಾವ ಸಂದೇಶ ಕೊಡುತ್ತದೆ ಎಂಬುದು ಮುಖ್ಯ ಅಲ್ಲವೇ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಖಳನಾಯಕಿಯರ ಅಟ್ಟಹಾಸ

ಸಾಮಾನ್ಯವಾಗಿ ಪುರುಷರೇ ಖಳನಾಯಕರಾಗಿರುತ್ತಾರೆ. ಕ್ರೌರ್ಯ, ಕ್ರೂರತನ, ಬ್ಲ್ಯಾಕ್ ಮೇಲ್, ರಕ್ತಪಾತ, ವಂಚಕತನ, ದ್ವಂದ್ವ ನೀತಿ ಮತ್ತು ಮಾತಿನ ಅಬ್ಬರ ಹೀಗೆ ಎಲ್ಲದರಲ್ಲೂ ಅವರೇ ಮೇಲುಗೈ ಸಾದಿಸುತ್ತಿದ್ದಾರೆ.

ಕನ್ನಡ ಧಾರಾವಾಹಿಗಳಲ್ಲಿ ಖಳನಾಯಕರಿಗಿಂತ ಖಳನಾಯಕಿಯರು ಕಡಿಮೆ ಇಲ್ಲ ಎನ್ನುವಂತೆ ಮೆರೆಯುತ್ತಿದ್ದಾರೆ. ಅವರ ಅಟ್ಟಹಾಸ ವೀಕ್ಷಕರನ್ನು ದಂಗುಬಡಿಸುತ್ತಿದೆ. ಬಹುತೇಕ ಧಾರಾವಾಹಿಯಲ್ಲೂ ಖಳನಾಯಕಿಯರು ಕಾಣುತ್ತಿದ್ದಾರೆ. ಸಾನಿಯಾ (ಕನ್ನಡತಿ), ಲಾವಣ್ಯ (ನನ್ನರಸಿ ರಾಧೆ), ಅಹಲ್ಯಾ–ಕಲ್ಪನಾ (ನಮ್ಮ ಮನೆ ಯುವರಾಣಿ), ಕವಿತಾ (ಮಿಥುನ ರಾಶಿ), ಸೌಂದರ್ಯ (ಮಂಗಳಗೌರಿ ಮದುವೆ) ಪುರುಷ ಖಳನಾಯಕರೂ ಮುಜುಗರ ಪಡುವಷ್ಟು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ.

ಖಳನಾಯಕರಾಗಲು ರಟ್ಟೆ ಬಲ, ಸ್ನಾಯುಬಲ, ಮಚ್ಚು– ಲಾಂಗ್, ರೌಡಿ ಗ್ಯಾಂಗ್ ಮತ್ತು ಆಜಾನುಬಾಹು ದೇಹದ ಅವಷ್ಯಕೆ ಇಲ್ಲ ಎನ್ನುವುದನ್ನು ಎತ್ತಿ ತೋರಿಸಿದ್ದಾರೆ. ಕಣ್ಣು ಕೋರೈಸುವ ಸೌಂದರ್ಯದ ಹಿಂದೆಯೂ ಖಳನಾಯಕ (ನಾಯಕಿ) ಇರುತ್ತಾನೆ(ಳೆ) ಎನ್ನುವ ವಾಸ್ತವ ಕನ್ನಡದ ಧಾರಾವಾಹಿಗಳು ತೋರಿಸುತ್ತಿವೆ. ಚಂದ್ರಿಕಾ (ಅಗ್ನಿ ಸಾಕ್ಷಿ) ಳಿಂದ ಆರಂಭವಾದ ಈ ಟ್ರೆಂಡ್ ಖಳನಾಯಕಿ ಪರಿಕಲ್ಪನೆಗೆ ಹೊಸ ರೂಪ ಕೊಟ್ಟಿದೆ.

—ರಮಾನಂದ ಶರ್ಮಾ, ನವದೆಹಲಿ